**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಹೊನ್ನಾವರ**

**ಸಿ.ಸಿ. ನಂ. 31/2025**

**ಚಾ.ಸಾಃ 6, ಫ್ರಾ.ಸಾಃ 3**

| | |
|---|---|
| ಸಾಕ್ಷಿದಾರನ ಹೆಸರು | ನಾರಾಯಣ ಗೌಡ |
| ತಂದೆಯ ಹೆಸರು | ಗಣಪಯ್ಯ ಗೌಡ |
| ವಯಸ್ಸು | 71 ವರ್ಷ |
| ಉದ್ಯೋಗ | ರೈತಾಬಿ |
| ವಾಸ | ಜಲವಳಕರ್ಕಿ, ತಾಃ ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 06-02-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಆರೋಪಿತರನ್ನು ನೋಡಿದ್ದೇನೆ. ಚಾಸಾ-1 ನನ್ನ ಮಗ.

ಈಗ್ಗೆ 2 ವರ್ಷಗಳ ಹಿಂದೆ ಒಂದು ದಿನ ರಾತ್ರಿ 08-30 ರಿಂದ 09-00 ಗಂಟೆ ಸಮಯದಲ್ಲಿ ನಾನು, ಚಾಸಾ-7 ಹಾಗೂ ನನ್ನ ಹೆಂಡತಿ ಮನೆಯಲ್ಲಿದ್ದಾಗ ನಮ್ಮ ಮನೆಯಿಂದ ಸುಮಾರು 100 ಮೀಟರ್ ದೂರದಲ್ಲಿ ಗಲಾಟೆಯಾದ ಶಬ್ದ ಕೇಳಿತು. ಆಗ ನಾನು ಮತ್ತು ಚಾಸಾ-7 ಏನಾಯಿತು ಎಂದು ನೋಡಲು ಹೋದಾಗ 2 ರಿಂದ 4 ನೇ ಆರೋಪಿತರು ನನ್ನ ಮಗ ಚಾಸಾ-1ರವರನ್ನು ಹಿಡಿದುಕೊಂಡಿದ್ದರು. ಆ ವೇಳೆಗೆ 1 ನೇ ಆರೋಪಿ ಒಂದು ದೊಣ್ಣೆಯನ್ನು ತೆಗೆದುಕೊಂಡು ಬಂದು ನನ್ನ ಮಗನ ಎಡಗಾಲಿಗೆ ಹೊಡೆದನು. ಅಲ್ಲದೇ ನಾಲ್ಕೂ ಜನರು ನನ್ನ ಮಗನೆ ಸೂಳೆಮಗನೆ ಎಂದು ಕೆಟ್ಟದಾಗಿ ಬೈಯ್ಯುತ್ತಿದ್ದರು. ನಾವು ಸ್ಥಳಕ್ಕೆ ಹೋಗಿದ್ದನ್ನು ನೋಡಿ ನಾಲ್ಕೂ ಜನರು ಅಲ್ಲಿಂದ ಓಡಿ ಹೋದರು. ಆಗ ನಾನು ನನ್ನ ಇನ್ನೊಬ್ಬ ಮಗ ಮಂಜುನಾಥನಿಗೆ ಫೋನ್ ಮಾಡಲಾಗಿ ಆತ ಒಂದು ರಿಕ್ಷಾ ಕಳುಹಿಸಿರುತ್ತಾನೆ. ರಿಕ್ಷಾದ ಮೂಲಕ ಚಾಸಾ-1ರವರನ್ನು ಆಸ್ಪತ್ರೆಗೆ ಕರೆದುಕೊಂಡು ಬಂದೆನು. ಹೊನ್ನಾವರ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಗೆ ಕರೆದುಕೊಂಡು ಹೋಗುವಂತೆ ಹೇಳಿದರು. ಆದ್ದರಿಂದ ಕುಂದಾಪುರದ ಚಿನ್ಮಯಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. 1 ನೇ ಆರೋಪಿ ನನ್ನ ಮಗನಿಗೆ ಹೊಡೆಯಲು ಬಳಸಿದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ದೊಣ್ಣೆಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ಮುಮಾ-1 ಎಂದು ಗುರುತಿಸಲಾಗಿದೆ.

ಗಲಾಟೆಯಾದ 2 ದಿನಗಳ ನಂತರ ಪೋಲೀಸರು ಘಟನಾ ಸ್ಥಳಕ್ಕೆ ಬಂದಿದ್ದರು. ಗಲಾಟೆಯಾದ ಜಾಗವನ್ನು ನಾನೇ ತೋರಿಸಿರುತ್ತೇನೆ. ನಂತರ ಪೋಲೀಸರು ಚಾಸಾ-2 ಮತ್ತು 3ರವರ ಸಮಕ್ಷಮ ಸದರಿ ಸ್ಥಳದಲ್ಲಿ ಪಂಚನಾಮೆ ಮಾಡಿ ಫೋಟೋ ತೆಗೆದಿರುತ್ತಾರೆ. ಸ್ಥಳ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-5 ಎಂದು ಸಾಕ್ಷಿ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ 2 ಫೋಟೋಗಳನ್ನು ನೋಡುತ್ತಿದ್ದು ನಿಪಿ-6 ಮತ್ತು 7 ಎಂದು ಗುರುತಿಸಲಾಯಿತು. ಆರೋಪಿತರಿಗೂ ನಮಗೂ ಮೊದಲಿನಿಂದಲೂ ಜಗಳ ಆಗುತ್ತಿತ್ತು, ಅದೇ ಕಾರಣಕ್ಕೆ ಈಗ ಹಲ್ಲೆ ಮಾಡಿರುತ್ತಾರೆ.

**ಪಾಟೀಸವಾಲುಃ-1 ರಿಂದ 4 ನೇ ಆರೋಪಿತರ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ**

ಆರೋಪಿತರಿಗೂ ನಮ್ಮ ಮಗನಿಗೂ ಸುಮಾರು 2 ವರ್ಷಗಳ ಹಿಂದಿನಿಂದಲೂ ಜಗಳ ಮಾಡಿಕೊಳ್ಳುತ್ತಿದ್ದರು. ಯಾವ ಕಾರಣಕ್ಕೆ ಜಗಳ ಆಡಿಕೊಳ್ಳುತ್ತಿದ್ದರು ಎಂದು ನಾನು ಕೇಳಲಿಲ್ಲ. ನನಗೂ ಆರೋಪಿತರಿಗೂ ಯಾವುದೇ ರೀತಿಯ ದ್ವೇಷ, ಜಗಳ ಇಲ್ಲ. ನನ್ನ ಮಗನಿಗೆ ಮಧ್ಯಪಾನ ಮಾಡುವ ಅಭ್ಯಾಸ ಇಲ್ಲ. ಮನೆಗೆ ಕುಡಿದು ಬರುವುದಿಲ್ಲ. ಮನೆಯಿಂದ ರಾತ್ರಿ 08-00 ಗಂಟೆ ಸಮಯಕ್ಕೆ ಆಚೆ ಹೋಗಿರಬಹುದು. ಮನೆಯಿಂದ ಹೋದ ಒಂದೆರಡು ನಿಮಿಷದಲ್ಲಿ ಗಲಾಟೆ ಆಗಿರುತ್ತದೆ. ಚಾಸಾ-7 ನನ್ನ ಅಣ್ಣನ ಮಗ. ನನ್ನ ಮಗ ಮನೆಯಿಂದ ಆಚೆ ಹೋಗುವಾಗ ಎಲ್ಲಿಗೆ ಹೋಗುತ್ತೇನೆ ಎಂದು ಹೇಳಲಿಲ್ಲ. ಘಟನಾ ಸ್ಥಳದಲ್ಲಿ ಕತ್ತಲಿತ್ತು ಎಂದರೆ ಸರಿಯಲ್ಲ. ಬೀದಿ ದೀಪ ಇದೆ. ನಮ್ಮ ಮನೆಯಿಂದ ಆಚೆ ಹೋಗುವಾಗ ಕತ್ತಲಿರುತ್ತದೆ, ಬ್ಯಾಟರಿ ತೆಗೆದುಕೊಂಡು ಹೋಗಬೇಕು. ಘಟನಾ ಸ್ಥಳದ ಸುತ್ತಮುತ್ತ ಹತ್ತಿರದಲ್ಲಿ ಯಾವುದೇ ಅಂಗಡಿಗಳು ಇಲ್ಲ. ಆರೋಪಿತರ ಮನೆಗಳು ಇವೆ. ಘಟನಾ ಸ್ಥಳ ನಮ್ಮ ಮನೆಯಿಂದ 100 ರಿಂದ 150 ಮೀಟರ್ ದೂರದಲ್ಲಿದೆ. ನಾನು ಹೋದಾಗ ಆರೋಪಿತರು ಮತ್ತು ಚಾಸಾ-1 ನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ನಾನು ಸ್ಥಳಕ್ಕೆ ಹೋಗುವಾಗ ಮನೆಯಿಂದ ಹೊರಟಾಗಲೇ ಬ್ಯಾಟರಿ ತೆಗೆದುಕೊಂಡು ಹೋಗಿದ್ದೆ. ನಾವು ಸ್ಥಳಕ್ಕೆ ಹೋದ ತಕ್ಷಣ ಅವರೆಲ್ಲ ಓಡಿ ಹೋಗಿರುತ್ತಾರೆ. ನಾನು ಸ್ಥಳಕ್ಕೆ ಹೋದಾಗ ಅವರು ನನ್ನ ಮಗನನ್ನು ಹಿಡಿದುಕೊಂಡಿದ್ದರು. ನಾವು ಸ್ಥಳಕ್ಕೆ ಹೋದ ತಕ್ಷಣ ಗಲಾಟೆ ಬಿಡಿಸಲು ಪ್ರಯತ್ನಿಸಲಿಲ್ಲ. ಏಕೆಂದರೆ ನಾವು ಸ್ಥಳಕ್ಕೆ ಹೋದ ತಕ್ಷಣವೇ ಆರೋಪಿತರು ಓಡಿ ಹೋಗಿರುತ್ತಾರೆ. ಪೋಲೀಸರು ಆಸ್ಪತ್ರೆಯಲ್ಲಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ನಾನು ಪೋಲೀಸರಿಗೆ ಹೇಳಿಕೆ ಕೊಡುವಾಗ 'ನಾನು ಮತ್ತು ಚಾಸಾ-7 ನನ್ನ ಮಗನಿಗೆ ಹೊಡೆಯುವುದನ್ನು ತಪ್ಪಿಸಿದ್ದು' ಅಂತ ಹೇಳಿಲ್ಲ. ಆರೋಪಿತರು ನನ್ನ ಮಗನನ್ನು ಹಿಡಿದುಕೊಂಡಿದ್ದು ಮತ್ತು ಹೊಡೆದದ್ದನ್ನು ಪೋಲೀಸರಿಗೆ ಹೇಳಿರುತ್ತೇನೆ. 2 ರಿಂದ 4 ನೇ ಆರೋಪಿತರು ನನ್ನ ಮಗನನ್ನು ಹಿಡಿದುಕೊಂಡಿದ್ದು 1 ನೇ ಆರೋಪಿ ದೊಣ್ಣೆಯಿಂದ ಹೊಡೆದಿರುತ್ತಾನೆ ಎಂಬ ವಿಚಾರವನ್ನು ನಾನು ಪೋಲೀಸರಿಗೆ ಹೇಳಿರುತ್ತೇನೆ. ನಾನು ಹೋಗುವುದರೊಳಗೆ 1 ನೇ ಆರೋಪಿ ದೊಣ್ಣೆಯನ್ನು ಕೈಯಲ್ಲಿ ಹಿಡಿದುಕೊಂಡಿದ್ದನು. ಎಲ್ಲಿಂದ ತಂದಿದ್ದನೋ ನನಗೆ ಗೊತ್ತಿಲ್ಲ. ಹೊಡೆದ ನಂತರ ದೊಣ್ಣೆಯನ್ನು ತೆಗೆದುಕೊಂಡು ಹೋಗಿರುತ್ತಾನೆ. 1 ನೇ ಆರೋಪಿಯ ಕೈಯಲ್ಲಿ ದೊಣ್ಣೆ ಇದ್ದದ್ದನ್ನು ನಾನು ನೋಡಿದ್ದೇನೆ. 1 ನೇ ಆರೋಪಿ ಮುದ್ದೆ ಮಾಲು-1 ರಿಂದಲೇ ಹೊಡೆದಿರುತ್ತಾನೆ. ನಮ್ಮ ಮನೆಯ ಅಕ್ಕಪಕ್ಕದವರ ಜೊತೆ ನಾನು ಚೆನ್ನಾಗಿದ್ದೇನೆ. ನಾನು ಹೋದ 2 ನಿಮಿಷದಲ್ಲಿ ಗಲಾಟೆ ಮುಗಿದು ಹೋಗಿರುತ್ತದೆ. ಘಟನಾ ಸ್ಥಳದ ಸುತ್ತ ಮುತ್ತ 10-15 ಮನೆಗಳು ಇದ್ದು ಅವು ಆರೋಪಿತರ ಕಡೆಯವರ ಮನೆಗಳಾಗಿದ್ದರಿಂದ ಘಟನಾ ಸ್ಥಳಕ್ಕೆ ಯಾರೂ ಬರಲಿಲ್ಲ. ಹಲ್ಲೆ ಮಾಡಿದಾಗ ನನ್ನ ಮಗನಿಗೆ ರಕ್ತ ಬಂದಿತ್ತು. ನನ್ನ ಮಗ ಘಟನಾ ಕಾಲಕ್ಕೆ ಲುಂಗಿ ಹಾಕಿಕೊಂಡಿದ್ದನು. ಅದನ್ನು ಪೋಲೀಸರು ತೆಗೆದುಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ನನ್ನ ಮಗನ ಜೊತೆ ಕುಂದಾಪುರಕ್ಕೆ ಚಿನ್ಮಯಿ ಆಸ್ಪತ್ರೆಗೆ ಹೋಗಿರುತ್ತೇನೆ. ಪಂಚರನ್ನು ಪೋಲೀಸರು ಕರೆದುಕೊಂಡು ಬಂದಿರುತ್ತಾರೆ. ನಾನು ಕರೆಸಲಿಲ್ಲ. ಸಂಜೆ 05-00 ರಿಂದ

05-30 ರ ಸಮಯಕ್ಕೆ ಪೋಲಿಸರು ಪಂಚನಾಮೆಗೆ ಬಂದಿರುತ್ತಾರೆ. ಸ್ಥಳದಲ್ಲಿ ಅಳತೆ ಮಾಡಿ ಫೋಟೋ ತೆಗೆದುಕೊಂಡಿರುತ್ತಾರೆ. ಘಟನಾ ಸ್ಥಳದಿಂದ ನಮ್ಮ ಮನೆಯ ದೂರವನ್ನು ಅಳತೆ ಮಾಡಿರಲಿಲ್ಲ. ಪಂಚನಾಮೆಯನ್ನು ಕಂಪ್ಯುಟರನಲ್ಲಿ ಮಾಡಿರುತ್ತಾರೆ. ನನಗೆ ಕನ್ನಡ ಓದಲು ಬರುವುದಿಲ್ಲ. ಪಂಚನಾಮೆಯನ್ನು ಓದಿ ಹೇಳಿರುತ್ತಾರೆ. ಚಕ್ಕು ಬಂದಿಯನ್ನು ಪೋಲೀಸರು ನನಗೆ ಓದಿ ಹೇಳಲಿಲ್ಲ. ಆರೋಪಿತರು ನನ್ನ ಮೇಲೆ ಯಾವುದೇ ದಾವೆ ಹಾಕಿಲ್ಲ. ನಮ್ಮ ಪಕ್ಕದ ಮನೆಯ ಮುಕುಂದ ಗೌಡ ಎನ್ನುವವರು ಒಂದು ದಾವೆ ಹಾಕಿರುತ್ತಾರೆ. ನಾನು ಯಾವುದೇ ಪ್ರಕರಣದಲ್ಲಿ ಆರೋಪಿಯಾಗಿಲ್ಲ. ನಾನು ಮುಕುಂದನ ಮೇಲೆ 2 ಕೇಸು ಮಾಡಿದ್ದೇನೆ. ಆತ ನನ್ನ ಮೇಲೆ ಒಂದು ಕೇಸು ಹಾಕಿದ್ದಾನೆ. ಆರೋಪಿತರು ಮುಕುಂದರವರ ಕೇಸಿನಲ್ಲಿ ನನ್ನ ವಿರುದ್ಧ ಸಾಕ್ಷಿ ಹೇಳಿದ್ದರು ಎಂದರೆ ಸರಿಯಲ್ಲ. ನನ್ನ ಮಗ ಮಧ್ಯಪಾನದ ಅಭ್ಯಾಸದಿಂದ ಮಧ್ಯಪಾನ ಮಾಡಿ ಎಲ್ಲರಿಗೂ ಹೆದರಿಸುತ್ತಾನೆ ಎಂದರೆ ಸರಿಯಲ್ಲ. ನನ್ನ ಮಗ ಕವಲಕ್ಕಿಯಿಂದ ಸಂಪೂರ್ಣವಾಗಿ ಮಧ್ಯಪಾನ ಮಾಡಿಕೊಂಡು ಕಾಲುದಾರಿಯಲ್ಲಿ ನಡೆದುಕೊಂಡು ಬರುವಾಗ ಬಿದ್ದು ಕಾಲಿಗೆ ಪೆಟ್ಟು ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಚಾಸಾ-1 ನಮ್ಮ ಮನೆಯಿಂದ ಆಚೆ ಹೋಗೇ ಇಲ್ಲ ಎಂದರೆ ಸರಿಯಲ್ಲ. ಮುಮಾ-1 ನ್ನು ಕೇಸಿಗೋಸ್ಕರ ನಾವೇ ಸೃಷ್ಟಿಸಿಕೊಟ್ಟಿದ್ದೇವೆ ಎಂದರೆ ಸರಿಯಲ್ಲ. 1 ನೇ ಆರೋಪಿ ಕೃತ್ಯಕ್ಕೆ ಬಳಸಿದಾಗ ದೊಣ್ಣೆ ನೋಡಿರುತ್ತೇನೆ. ಅದಾದ ನಂತರ ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ನಾನೇ ಮುಮಾ-1 ನ್ನು ಪೋಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**
**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**